ಹನಿಗಾರಿಕೆ!

ಬಂಡಾಯ

ಚುನಾವಣೆಗೆ ನಿಂತ
ಬಂಡಾಯ ಅಭ್ಯರ್ಥಿಗಳು
ಏನೇನೋ ಹೇಳುವರು ನಿತ್ಯ
ಬಹಳಷ್ಟು ಜನ ಓದುವುದಿಲ್ಲ
ಈ ಬಂಡಾಯ ಸಾಹಿತ್ಯ!

– ಎಚ್. ಡುಂಡಿರಾಜ್

ಹರಿಹರ-ಯಶವಂತಪುರ ಇಂಟರ್‌ಸಿಟಿ ಎಕ್ಸ್‌ಪ್ರೆಸ್ ವೇಳಾಪಟ್ಟಿ ಬದಲಿಗೆ ಮನವಿ

ದಾವಣಗೆರೆ: ಹರಿಹರದಿಂದ ಯಶವಂತಪುರಕ್ಕೆ ಸಂಚರಿಸುವ ಇಂಟರ್‌ಸಿಟಿ ರೈಲಿನ ವೇಳಾಪಟ್ಟಿ ಬದಲಿಸಿ, ಮಧ್ಯ ಕರ್ನಾಟಕ ಭಾಗದ ಜನರಿಗೆ ಅನುಕೂಲ ಮಾಡಿಕೊಡಬೇಕು ಎಂದು ಕೇಂದ್ರ ಸಚಿವ ಜಿ.ಎಂ. ಸಿದ್ದೇಶ್ವರ್ ರೈಲ್ವೆ ಸಚಿವ ಸುರೇಶ್ ಪ್ರಭು ಅವರಿಗೆ ಮನವಿ ಸಲ್ಲಿಸಿದ್ದಾರೆ.

ಹಾಲಿ ರೈಲು ಬೆಳಗ್ಗೆ 5 ಗಂಟೆಗೆ ಹರಿಹರದಿಂದ, ಸಂಜೆ 4.30ಕ್ಕೆ ಯಶವಂತಪುರದಿಂದ ಬಿಡುತ್ತಿದೆ. ಇದರ ಬದಲು ಬೆಳಗ್ಗೆ 6 ಗಂಟೆಗೆ ಹರಿಹರ ಹಾಗೂ ಸಂಜೆ 6 ಗಂಟೆಗೆ ಯಶವಂತಪುರ ಬಿಡುವಂತೆ ಕ್ರಮ ಕೈಗೊಳ್ಳಬೇಕು. ಜೊತೆಗೆ ರೈಲು ಬೆಂಗಳೂರಿಗೆ ತಲುಪುವಂತೆ ಮಾಡಬೇಕು. ಹಾಲಿ ಇರುವ ನಿಲುಗಡೆಗಳ ಜೊತೆಗೆ ಹೊಳಲ್ಕೆರೆ, ಬೀರೂರು ಜಂಕ್ಷನ್‌ಗಳಲ್ಲಿ ನಿಲುಗಡೆ ನೀಡಬೇಕು. ಆಗ ರೈಲಿನ ಆದಾಯ ಹೆಚ್ಚಳ ಆಗಲಿದೆ.

ಈಗ ರೈಲು ಬೆಂಗಳೂರು ತಲುಪಲು 6 ರಿಂದ 7 ಗಂಟೆ ಸಮಯ ತೆಗೆದುಕೊಳ್ಳುತ್ತಿದೆ. ಇದು 5 ಗಂಟೆ ಅವಧಿಯಲ್ಲಿ ಬೆಂಗಳೂರು ತಲುಪುವಂತಾಬೇಕು ಎಂದು ಅವರು ತಿಳಿಸಿದ್ದಾರೆ.

ಹುಬ್ಬಳ್ಳಿ-ಚಿಕ್ಕಜಾಜೂರು ನಡುವೆ 190 ಕಿಮೀ ಉದ್ದದ ರೈಲ್ವೆ ಡಬ್ಲಿಂಗ್ ಕಾಮಗಾರಿಗೆ 1900 ಕೋಟಿ ಅನುದಾನ ನಿಗದಿಪಡಿಸಲಾಗಿತ್ತು. ಈಗಾಗಲೆ ರೈಲ್ವೆ ಇಲಾಖೆ 43.44 ಕೋಟಿ ಅನುದಾನ ಬಿಡುಗಡೆ ಮಾಡಿದೆ. ಅರಸೀಕೆರೆ-ತುಮಕೂರು 96 ಕಿಮೀ ಉದ್ದದ ಜೋಡಿ ಮಾರ್ಗಕ್ಕೆ ನಿಗದಿಮಾಡಿರುವ 960 ಕೋಟಿಯಲ್ಲಿ 22 ಕೋಟಿಯನ್ನು ಬಿಡುಗಡೆ ಮಾಡಲಾಗಿದೆ. ಈ ಎರಡೂ ಕಾಮಗಾರಿಗಳಿಗೆ ಜನವರಿ ಅಥವಾ ಫೆಬ್ರವರಿ ತಿಂಗಳಲ್ಲಿ ಶಂಕುಸ್ಥಾಪನೆ ನೆರವೇರಿಸಲು ರೈಲ್ವೆ ಸಚಿವರು ಆಗಮಿಸಬೇಕು ಎಂದು ಅವರು ಮನವಿ ಮಾಡಿದರು.

ಹರಿಹರ-ಕೊಟ್ಟೂರು ರೈಲನ್ನು ಹೊಸಪೇಟೆಯವರೆಗೆ ವಿಸ್ತರಿಸುವಂತೆ ಹಾಗೂ ಹುಬ್ಬಳ್ಳಿ- ಬೆಂಗಳೂರು ಇಂಟರ್ ಸಿಟಿ ರೈಲಿಗೆ ಹೊಸದುರ್ಗ ನಿಲ್ದಾಣದಲ್ಲಿ ಒದಗಿಸಿರುವ ನಿಲುಗಡೆ ರದ್ದುಪಡಿಸದೇ ಮುಂದುವರೆಸುವಂತೆ ಕೋರಿದರು.

ಚಿತ್ರದುರ್ಗ ಸಂಸದ ಬಿ.ಎನ್. ಚಂದ್ರಪ್ಪ, ತುಮಕೂರು ಸಂಸದ ಮುದ್ದಹನುಮೇಗೌಡ ಭೇಟಿ ಸಂದರ್ಭದಲ್ಲಿದ್ದರು ಎಂದು ಪ್ರಕಟಣೆ ತಿಳಿಸಿದೆ.

ಮನವಿ..

ದಾವಣಗೆರೆ: ಹರಿಹರ-ಯಶವಂತಪುರ ಇಂಟರ್‌ಸಿಟಿ ಎಕ್ಸ್‌ಪ್ರೆಸ್ ವೇಳಾಪಟ್ಟಿ ಬದಲಿಸಲು ರೈಲ್ವೆ ಸಚಿವ ಸುರೇಶ್ ಪ್ರಭುರಿಗೆ ತುಮಕೂರು ಸಂಸದ ಮುದ್ದುಹನುಮೇಗೌಡ ಮನವಿ ಸಲ್ಲಿಸಿದ ಸಂದರ್ಭ. ಕೇಂದ್ರ ಸಚಿವ ಜಿ.ಎಂ.ಸಿದ್ದೇಶ್ವರ್, ಚಿತ್ರದುರ್ಗ ಸಂಸದ ಬಿ.ಎನ್.ಚಂದ್ರಪ್ಪ ಇದ್ದಾರೆ.

ಸಿನಿಮಾ ಡೈರಿ

ಅರುಣ	ದಿಲ್‌ವಾಲೆ(ಹಿಂದಿ)
ಅಶೋಕ	ರಥಾವರ(ಕನ್ನಡ)
ಗೀತಾಂಜಲಿ	ಹುಚ್ಚ ವೆಂಕಟ್(ಕನ್ನಡ)
ಪುಷ್ಪಾಂಜಲಿ	ಬಂಗಾಲಿ ಟೈಗರ್(ತೆಲುಗು)
ಪದ್ಮಾಂಜಲಿ	ಫಸ್ಟ್ ರ್‍ಯಾಂಕ್ ರಾಜು(ಕನ್ನಡ)
ತ್ರಿನೇತ್ರ	ಊಜಾ(ಕನ್ನಡ)
ತ್ರಿಶೂಲ್	ಪ್ರೇಮಪಲ್ಲಕಿ(ಕನ್ನಡ)
ವಸಂತ	ಬಾಜಿರಾವ್ ಮಸ್ತಾನಿ(ಹಿಂದಿ)
ಮೋತಿ	ರಾಮಲೀಲಾ(ಕನ್ನಡ)
ಶಿವಾಲಿ	ಲೋಫರ್(ತೆಲುಗು)

ಇಂದು ಕರವೇಯಿಂದ ಕನ್ನಡ ರಾಜ್ಯೋತ್ಸವ

ದಾವಣಗೆರೆ: ಕರ್ನಾಟಕ ರಕ್ಷಣಾ ವೇದಿಕೆ(ಪ್ರವೀಣ್ ಶೆಟ್ಟಿ ಬಣ)ವತಿಯಿಂದ ಇಂದು ಸಂಜೆ 6 ಗಂಟೆಗೆ ಶ್ರೀ ಶಿವಯೋಗಿ ಮಂದಿರದಲ್ಲಿ 60ನೇ ಕನ್ನಡ ರಾಜ್ಯೋತ್ಸವ, ಹಾಸ್ಯ ಸಂಜೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ವೇದಿಕೆ ಮಧ್ಯ ಕರ್ನಾಟಕದ ಅಧ್ಯಕ್ಷ ಕೆ.ಜಿ. ಯಲ್ಲಪ್ಪ, ವೇದಿಕೆ ರಾಜ್ಯಾಧ್ಯಕ್ಷ ಪ್ರವೀಣ್‌ಕುಮಾರ್ ಶೆಟ್ಟಿ ಕಾರ್ಯಕ್ರಮ ಉದ್ಘಾಟಿಸುವರು. ಜಿಲ್ಲಾ ಉಸ್ತುವಾರಿ ಸಚಿವ ಶಾಮನೂರು ಶಿವಶಂಕರಪ್ಪ, ಜಿಲ್ಲಾಧಿಕಾರಿ ಎಸ್.ಟಿ. ಅಂಜನ್‌ಕುಮಾರ್, ಚಿತ್ರ ನಟರಾದ ಶ್ರೀನಗರ ಕಿಟ್ಟಿ, ಶ್ವೇತಾ ಶ್ರೀವಾಸ್ತವ್ ಅನೇಕ ಗಣ್ಯರು ಪಾಲ್ಗೊಳ್ಳಲಿದ್ದಾರೆ ಎಂದರು. ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಮಲ್ಲಿಕಾ ಘಂಟಿಯವರನ್ನು ಇದೇ ಸಂದರ್ಭದಲ್ಲಿ ಸನ್ಮಾನಿಸಲಾಗುವುದು. ರವಿ ಭಜಂತ್ರಿ ಮತ್ತು ಕೋಗಳಿ ಕೊಟ್ರೇಶ್‌ರಿಂದ ಹಾಸ್ಯ ಸಂಜೆ ಕಾರ್ಯಕ್ರಮ ನಡೆಯಲಿದೆ ಎಂದು ಅವರು ತಿಳಿಸಿದರು. ವೇದಿಕೆಯ ಗೌರವಾಧ್ಯಕ್ಷ ಲಕ್ಷ್ಮಣ್‌ರಾವ್ ಸಾಳಂಕಿ, ಉಪಾಧ್ಯಕ್ಷ ನಾಗರಾಜಗೌಡ, ಪ್ರಧಾನ ಕಾರ್ಯದರ್ಶಿ ಅಮ್ಜದ್ ಆಲಿ, ಎಂ. ರವಿ, ಮಹಿಳಾ ಘಟಕದ ನೌಷೀನ್ ತಾಜ್, ರಷೀದಾ ಬಾನು ಇತರರು ಸುದ್ದಿಗೋಷ್ಠಿಯಲ್ಲಿದ್ದರು.

ಇಂದು ಸ್ವಪ್ನ-2 ಚಿಣ್ಣರ ಕನಸು: ಜಿ.ಎಂ. ನರ್ಸರಿ, ಪಿಇಎಸ್ ಹೈಮರ್ ಪ್ರೈಮರಿ, ಅಥಣಿ ಹೈಸ್ಕೂಲ್, ಅಥಣಿ ಸೆಕೆಂಡರಿ ಸ್ಕೂಲ್‌ನಲ್ಲಿ ಡಿ. 19 ರಂದು ಶನಿವಾರ ಬೆಳಿಗ್ಗೆ 10 ರಿಂದ ಮಧ್ಯಾಹ್ನ 3ರ ವರೆಗೆ ಸ್ವಪ್ನ-2 ಚಿಣ್ಣರ ಕನಸು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಚಿತ್ರಕಲಾ ಪ್ರದರ್ಶನ, ವಿಜ್ಞಾನ ಮೇಳ, ಹಣ್ಣುಗಳ ಮಳಿಗೆ, ವಿವಿಧ ತಿಂಡಿಗಳ ಮಳಿಗೆ, ಹಾಸ್ಯದ ಆಟ, ಹಾಸ್ಯ ಗಣಿತ, ಐಸ್‌ಕ್ರೀಂ, ಬಿಸ್ಕೆಟ್ ಅಂಗಡಿ, ಮೆಹಂದಿ, ಟ್ಯಾಟೂ ಕಾರ್ನರ್, ಸ್ಟೇಷನರಿ ಅಂಗಡಿ ಇತರೆ ಮಳಿಗೆ ಇರಲಿವೆ ಎಂದು ಪ್ರಕಟಣೆ ತಿಳಿಸಿದೆ.

ಅಖಿಲ ಭಾರತ ಗೃಹರಕ್ಷಕ ದಿನಾಚರಣೆ: ಜಿಲ್ಲಾ ಗೃಹರಕ್ಷಕ ದಳದಿಂದ ಡಿ.19ರಂದು ಮಧ್ಯಾಹ್ನ 3 ಗಂಟೆಗೆ ಜಿಲ್ಲಾ ಪೊಲೀಸ್ ಸಶಸ್ತ್ರ ಮೀಸಲು ಕವಾಯತು ಮೈದಾನದಲ್ಲಿ ಅಖಿಲ ಭಾರತದ ಗೃಹ ರಕ್ಷಕದಳ ದಿನಾಚರಣೆ ಹಮ್ಮಿಕೊಳ್ಳಲಾಗಿದ್ದು, ಜಿಲ್ಲಾಧಿಕಾರಿ ಎಸ್.ಟಿ. ಅಂಜನ್ ಕುಮಾರ್, ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಎಂ.ಬಿ. ಬೋರಲಿಂಗಯ್ಯ, ಜಿಲ್ಲಾ ಗೃಹ ರಕ್ಷಕ ದಳದ ಸಮಾದೇಷ್ಟ ಡಾ| ಬಿ.ಎಚ್. ವೀರಪ್ಪ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

ಚನ್ನಗಿರಿ ತುಮ್‌ಕೋಸ್
ಅಡಕೆ ಧಾರಣೆ
ರಾಶಿ: 26,799-27,529 (ಸರಾಸರಿ-27,300)

ಸಾಮೂಹಿಕ ಕಲ್ಯಾಣ ಮಹೋತ್ಸವ

ಹೊಂದಾಣಿಕೆಯಿಂದ ಸುಮಧುರ ಜೀವನ

■ ಅದ್ಧೂರಿ ವಿವಾಹಕ್ಕಿಂತ ಸರಳ ಸಾಮೂಹಿಕ ವಿವಾಹಗಳಲ್ಲಿಯೇ ಗ್ರಹಸ್ಥಾಶ್ರಮಕ್ಕೆ ಅಡಿ ಇಡಿ: ಎಸ್ಸೆಸ್

ದಾವಣಗೆರೆ: ಸತಿ-ಪತಿ ಪರಸ್ಪರ ಹೊಂದಾಣಿಕೆ, ತಾಳ್ಮೆ, ಪ್ರೀತಿ, ಸಹನೆಯೊಂದಿಗೆ ಉತ್ತಮ ಜೀವನ ನಡೆಸಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಶಾಮನೂರು ಶಿವಶಂಕರಪ್ಪ ಕಿವಿಮಾತು ಹೇಳಿದ್ದಾರೆ.

ಶುಕ್ರವಾರ ಶ್ರೀ ಗುರು ರಾಮದಾಸಸ್ವಾಮಿ ಆಧ್ಯಾತ್ಮಿಕ ಸೇವಾ ಸಂಘದಿಂದ ಶ್ರೀ ಗುರು ಮಾದಾರ ಚನ್ನಯ್ಯಸ್ವಾಮಿಯವರ 26ನೇ ವರ್ಷದ ಜಯಂತ್ಯುತ್ಸವ, ಶ್ರೀ ಗುರು ರಾಮದಾಸ ಸ್ವಾಮಿಗಳ 60ನೇ, ಶ್ರೀ ಮಲ್ಲಯ್ಯಸ್ವಾಮಿಗಳ 19ನೇ, ಶ್ರೀ ಕೊಂಡಯ್ಯಸ್ವಾಮಿಗಳ 13ನೇ ವರ್ಷದ ಪುಣ್ಯಾರಾಧನೆ ಅಂಗವಾಗಿ ಗಾಂಧಿನಗರದ ಶ್ರೀಮತಿ ಶಾಮನೂರು ಪಾರ್ವತಮ್ಮ ಶಿವಶಂಕರಪ್ಪ ಸಮುದಾಯ ಭವನದಲ್ಲಿ ಏರ್ಪಡಿಸಿದ್ದ 26ನೇ ವರ್ಷದ ಸಾಮೂಹಿಕ ಕಲ್ಯಾಣ ಮಹೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ಮನೆ ಕಟ್ಟಿ ನೋಡು, ಮದುವೆ ಮಾಡಿ ನೊಡು ಎಂಬ ಮಾತಿನಂತೆ ಇಂದಿನ ದಿನಮಾನಗಳಲ್ಲಿ ಮದುವೆ ಅತ್ಯಂತ ವೆಚ್ಚದಾಯಕವಾಗುತ್ತಿವೆ. ಬಡವರು ಅಷ್ಟೊಂದು ಖರ್ಚು ಭರಿಸುವ ಸ್ಥಿತಿಯಲ್ಲಿದ್ದರೂ ಈ ರೀತಿಯ ಸಾಮೂಹಿಕ ಮದುವೆಯಲ್ಲಿ ಗೃಹಸ್ಥಾಶ್ರಮ ಪ್ರವೇಶಿಸುವ ಮೂಲಕ ಒಳ್ಳೆಯ ಜೀವನ ನಡೆಸಬೇಕು ಎಂದರು.

ದಾವಣಗೆರೆ: ಶುಕ್ರವಾರ ಶ್ರೀ ಗುರು ರಾಮದಾಸಸ್ವಾಮಿ ಆಧ್ಯಾತ್ಮಿಕ ಸೇವಾ ಸಂಘದಿಂದ ಆಯೋಜಿಸಿದ್ದ ಸಾಮೂಹಿಕ ಕಲ್ಯಾಣ ಮಹೋತ್ಸವಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಶಾಮನೂರು ಶಿವಶಂಕರಪ್ಪ ಜ್ಯೋತಿ ಬೆಳಗಿಸುವ ಮೂಲಕ ಚಾಲನೆ ನೀಡಿದರು.

ಅತ್ತೆ ಸೊಸೆಯನ್ನು ಮಗಳಂತೆ, ಸೊಸೆ ಅತ್ತೆಯನ್ನು ತಾಯಿಯಂತೆ ನೋಡಿಕೊಂಡಾಗ ಯಾವುದೇ ಜಗಳ, ವೈಮನಸ್ಸು ಬರುವುದೇ ಇಲ್ಲ. ಎಲ್ಲರೂ ಹೊಂದಾಣಿಕೆಯಿಂದ ಜೀವನ ಸಾಗಿಸಬೇಕು. ಅದಕ್ಕಾಗಿಯೇ ಶ್ರೀ ಗುರು ರಾಮದಾಸಸ್ವಾಮಿ ಆಧ್ಯಾತ್ಮಿಕ ಸೇವಾ ಸಂಘ ಕಳೆದ 26 ವರ್ಷದಿಂದ ಸಾಮೂಹಿಕ ಮದುವೆ ನಡೆಸಿಕೊಂಡು ಬರುತ್ತಿದೆ. ನಿಜಕ್ಕೂ ಸಂಘದ ಕೆಲಸ ಶ್ಲಾಘನೀಯ ಎಂದು ಹೇಳಿದರು.

ಸಾನ್ನಿಧ್ಯ ವಹಿಸಿದ್ದ ದಾವಣಗೆರೆ ವಿರಕ್ತ ಮಠದ ಶ್ರೀ ಬಸವಪ್ರಭು ಸ್ವಾಮೀಜಿ ಮಾತನಾಡಿ, ಎರಡು ಕಣ್ಣಿದ್ದರೂ ಒಂದನ್ನೇ ನೋಡುವಂತೆ, ಎರಡು ಕಿವಿಯಿದ್ದರೂ ಒಂದನ್ನೇ ಕೇಳಿಸಿಕೊಳ್ಳುವಂತೆ, ಎರಡು ಕಾಲುಗಳು ಒಂದೇ ದಿಕ್ಕಿಗೆ ಹೆಜ್ಜೆ ಹಾಕುವಂತೆ ದಂಪತಿ ಒಂದೇ ಹಾದಿಯಲ್ಲಿ ಸಾಗಬೇಕು. ಮದುವೆ ಕೇವಲ ದೈಹಿಕ ಸಂಬಂಧಕ್ಕಲ್ಲ, ಎರಡು ಮನಸ್ಸುಗಳ ಅಪೂರ್ವ ಸಮ್ಮಿಲನ. ಮದುವೆಗೆ ಕಲ್ಯಾಣ ಎಂತಲೂ ಕರೆಯಲಾಗುತ್ತದೆ. ಕಲ್ಯಾಣ ಎಂದರೆ ಒಳಿತು ಎಂದರ್ಥ. ಸತಿ-ಪತಿ ಸಾಮರಸ್ಯ, ಹೊಂದಾಣಿಕೆ, ಪ್ರೀತಿ, ನಂಬಿಕೆಯಿಂದ ಬದುಕು ಸಾಗಿಸಬೇಕು ಎಂದರು.

ಕೋಡಿಹಳ್ಳಿ ಆದಿಜಾಂಬವ ಮಠದ ಶ್ರೀ ಷಡಕ್ಷರಿಮುನಿ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿ, ಅತ್ಯಂತ ಅದ್ದೂರಿಯಾಗಿ ನಡೆಯುವಂಥಹ ಮದುವೆಗಳು ಕ್ಷುಲ್ಲಕ ಕಾರಣಕ್ಕಾಗಿ ವಿಚ್ಛೇದನದಲ್ಲಿ ಮುಕ್ತಾಯ ಆಗುತ್ತಿರುವುದು ನಿಜಕ್ಕೂ ಆತಂಕಕಾರಿ. ವಿಚ್ಛೇದನ ಭಾರತೀಯ ಸಂಪ್ರದಾಯ ಮಾತ್ರವಲ್ಲ ಸಂಸ್ಕೃತಿಯೂ ಅಲ್ಲ. ಕಲ್ಯಾಣ ಎಂದರೆ ಶ್ರೇಯಸ್ಸು ಎಂಬುದನ್ನು ದಂಪತಿ ಅರ್ಥ ಮಾಡಿಕೊಂಡು ಒಳ್ಳೆಯ ಜೀವನ ಸಾಗಿಸಬೇಕು ಎಂದು ತಿಳಿಸಿದರು.

ಶ್ರೀ ಗುರು ರಾಮದಾಸಸ್ವಾಮಿ ಆಧ್ಯಾತ್ಮಿಕ ಸೇವಾ ಸಂಘದ ಅಧ್ಯಕ್ಷ ಬಿ.ಎಚ್. ವೀರಭದ್ರಪ್ಪ ಅಧ್ಯಕ್ಷತೆ ವಹಿಸಿದ್ದರು. ಬಾಪೂಜಿ ವಿದ್ಯಾಸಂಸ್ಥೆ ಖಜಾಂಚಿ ಎ.ಸಿ. ಜಯಣ್ಣ, ಮಹಾನಗರಪಾಲಿಕೆ ಮಾಜಿ ಸದಸ್ಯ ದೋಣಿ ಎಸ್. ನಿಂಗಪ್ಪ, ಸಂಘದ ಪ್ರಧಾನ ಕಾರ್ಯದರ್ಶಿ ಬಿ.ಎಂ. ಈಶ್ವರ್, ಉಪಾಧ್ಯಕ್ಷರಾದ ಎಸ್. ಶಿವಲಿಂಗಪ್ಪ, ಬೆಳ್ಳೊಡಿ ದುಗ್ಗಪ್ಪ, ಹುಚ್ಚೆಂಗೆಪ್ಪ, ಖಜಾಂಚಿ ಬಿ.ಎಂ. ರಾಮಸ್ವಾಮಿ, ಶಿವಳ್ಳಿ ಡಿ. ಗಂಗಾಧರಪ್ಪ ಇತರರು ಇದ್ದರು. ಇದೇ ಸಂದರ್ಭದಲ್ಲಿ 5 ಜೋಡಿಗಳು ನೂತನ ದಾಂಪತ್ಯ ಜೀವನಕ್ಕೆ ಕಾಲಿರಿಸಿದವು.

ಆಡಂಬರರಹಿತ, ಆದರ್ಶಮಯ..

ಜೀವನದಲ್ಲಿ ಕಷ್ಟ-ಸುಖ ಎಲ್ಲವನ್ನೂ ತಾಳ್ಮೆಯಿಂದ ಸ್ವೀಕರಿಸಬೇಕು ಎಂಬ ಸಂದೇಶದ ಸಂಕೇತವಾಗಿ ತಾಳಿ ಕಟ್ಟಲಾಗುತ್ತದೆ. ಇಬ್ಬರು ತಾಳ್ಮೆ, ಸಹನೆಯಿಂದ ಜೀವನ ಸಾಗಿಸಬೇಕು. ನದಿ ದಾಟಲು ತೆಪ್ಪ ಬೇಕು. ಅದೇ ರೀತಿ ಜೀವನದ ನದಿ ದಾಟುವಾಗ ಯಾರಾದರೂ ಒಬ್ಬರು ತೆಪ್ಪಗಿರಬೇಕು. ಹೆಂಡತಿಗೆ ಕೋಪ ಬಂದಾಗ ಗಂಡ, ಗಂಡನಿಗೆ ಕೋಪ ಬಂದಾಗ ಸುಮ್ಮನಿರಬೇಕು. ಇಲ್ಲದೇ ಹೋದಲ್ಲಿ ಯುದ್ಧವೇ ನಡೆದು ಹೋಗುತ್ತದೆ. ಸಂಸಾರ ಹಾಳಾಗುತ್ತದೆ. ಅಂಥದ್ದಕ್ಕೆ ಅವಕಾಶ ನೀಡದೆ, ಒಳ್ಳೆಯ ಬದುಕನ್ನು ಕಟ್ಟಿಕೊಳ್ಳಬೇಕು. ಮದುವೆ ಆಡಂಬರ ರಹಿತ, ಆದರ್ಶಮಯವಾಗಿ ಇರಬೇಕು.

-ಶ್ರೀ ಬಸವಪ್ರಭು ಸ್ವಾಮೀಜಿ,
ವಿರಕ್ತ ಮಠ

ಎಸ್‌ಎಸ್ ಹೈಟೆಕ್ ಆಸ್ಪತ್ರೆಯಲ್ಲಿ ಸೀಳುತುಟಿಗೆ ಉಚಿತ ಶಸ್ತ್ರ ಚಿಕಿತ್ಸೆ

ದಾವಣಗೆರೆ: ಎಸ್‌ಎಸ್ ಹೈಟೆಕ್ ಆಸ್ಪತ್ರೆಯಲ್ಲಿ ಸೀಳುತುಟಿ ಮತ್ತು ಅಂಗುಳದ ವಾರ (ಕ್ಲೆಫ್ಟ್ ವೀಕ್)ದ ಹಿನ್ನೆಲೆಯಲ್ಲಿ ಡಿ.14ರಿಂದ ಉಚಿತ ಸಲಹೆ ಮತ್ತು ಚಿಕಿತ್ಸಾ ಶಿಬಿರ ನಡೆಯುತ್ತಿದೆ ಎಂದು ಆಸ್ಪತ್ರೆಯ ನಿರ್ದೇಶಕ ಡಾ| ಎನ್.ಕೆ. ಕಾಳಪ್ಪನವರ್ ಹೇಳಿದ್ದಾರೆ.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ನಮ್ಮ ಆಸ್ಪತ್ರೆಯಲ್ಲಿ ಈಗಾಗಲೇ ಸೀಳುತುಟಿಗೆ ನಿರಂತರವಾಗಿ ಉಚಿತ ಶಸ್ತ್ರ ಚಿಕಿತ್ಸೆ ನೀಡಲಾಗುತ್ತಿದೆ. ಸಾರ್ವಜನಿಕರು ಈ ಸೌಲಭ್ಯ ಸದುಪಯೋಗ ಪಡೆದುಕೊಳ್ಳಬೇಕು ಎಂದು ಮನವಿ ಮಾಡಿದರು.

ದೇಶದಲ್ಲಿ ಪ್ರತಿವರ್ಷ 35 ಸಾವಿರ ಮಕ್ಕಳು ಸೀಳುತುಟಿ ಮತ್ತು ಸೀಳು ಅಂಗುಳದ ದೋಷದಿಂದ ಜನಿಸುತ್ತಿದ್ದಾರೆ. ಪ್ರತಿ 600-700 ಮಕ್ಕಳಲ್ಲಿ ಒಂದು ಮಗು ಸೀಳುತುಟಿ ಸಮಸ್ಯೆಗೆ ತುತ್ತಾಗುತ್ತಿದೆ. ಈ ಸಮಸ್ಯೆಯನ್ನು ಚಿಕಿತ್ಸೆಯಿಂದ ಸರಿಪಡಿಸಬಹುದಾಗಿದೆ. ಮಗು ಗರ್ಭದಲ್ಲಿದ್ದಾಗಲೇ ಈ ಕಾಯಿಲೆ ಗುರುತಿಸಿ, ಸರಿಪಡಿಸಬಹುದಾಗಿದೆ. ಅನುವಂಶೀಯವಾಗಿ, ಸಂಬಂಧಿಕರಲ್ಲೇ ಮದುವೆಯಾಗುವುದರಿಂದ ಹೆಚ್ಚಾಗಿ ಈ ಸಮಸ್ಯೆ ಕಾಣಿಸಿಕೊಳ್ಳುತ್ತದೆ. ದೋಷ ಕಾಣಿಸಿಕೊಂಡ ಮಗುವಿಗೆ ಕೇವಲ ಸೀಳುತುಟಿ ಮಾತ್ರವಲ್ಲ ಇತರೆ ಸಮಸ್ಯೆಗಳು ಸಹ ಕಾಡುತ್ತವೆ ಎಂದು ಅವರು ಹೇಳಿದರು.

ಸೀಳುತುಟಿಯಿಂದ ಹುಟ್ಟಿದ ಮಗು ಮಾನಸಿಕ ಖಿನ್ನತೆಗೆ ಈಡಾಗುತ್ತದೆ. ಬರು ಬರುತ್ತಾ ಮಗುವನ್ನು ಅಣಕಿಸುವವರು ಹೆಚ್ಚಾಗುತ್ತಾರೆ. ಇದು ಮಗುವಿನ ಮನಸ್ಸಿನ ಮೇಲೆ ತೀವ್ರ ತರಹದ ಪರಿಣಾಮ ಬೀರುತ್ತದೆ. ಇದನ್ನು ತಪ್ಪಿಸಲು ಶಸ್ತ್ರ ಚಿಕಿತ್ಸೆ ಅನಿವಾರ್ಯವಾಗಿದೆ. ಇದೇ ಕಾರಣಕ್ಕೆ ನಮ್ಮ ಆಸ್ಪತ್ರೆಯಲ್ಲಿ ಉಚಿತ ಶಸ್ತ್ರ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಅವರು ಹೇಳಿದರು.

ಗರ್ಭಿಣಿಯರು ವೈದ್ಯರ ಸಲಹೆಯಿಲ್ಲದೆ ಸಿಕ್ಕ ಸಿಕ್ಕ ಔಷಧ ತೆಗೆದುಕೊಳ್ಳುವುದರಿಂದಲೂ ಮಕ್ಕಳಲ್ಲಿ ನ್ಯೂನ್ಯತೆ ಕಂಡುಬರುತ್ತದೆ. ವೈದ್ಯರ ಸಲಹೆ ಹೊರತು ಗರ್ಭಿಣಿಯರು ಯಾವುದೇ ಮಾತ್ರೆ, ಔಷಧ ತೆಗೆದುಕೊಳ್ಳಬಾರದು. ಆಧುನಿಕ ರೀತಿಯ ಸ್ಕ್ಯಾನಿಂಗ್ ಮಾಡಿಸಿ, ಮಗುವಿನ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು ಎಂದರು.

ಎಸ್‌ಎಸ್ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ| ಬಿ.ಎಸ್. ಪ್ರಸಾದ್, ಆಸ್ಪತ್ರೆಯ ಸೀಳು ತುಟಿ ಮತ್ತು ಅಂಗುಳ ತಜ್ಞ, ಪ್ಲಾಸ್ಟಿಕ್ ಸರ್ಜನ್ ಡಾ| ಕೆ. ಸಿ. ಶಿವಮೂರ್ತಿ ಸುದ್ದಿಗೋಷ್ಠಿಯಲ್ಲಿದ್ದರು.

ಭದ್ರಾ ನಾಲೆಯಿಂದ ಕೆರೆಗಳಿಗೆ ನೀರು ಹರಿಸೋದು ಬೇಡ

ದಾವಣಗೆರೆ: ಭದ್ರಾ ನಾಲೆಯಿಂದ ಕೆರೆಗಳಿಗೆ ನೀರು ಹರಿಸುವುದರಿಂದ ಕೊನೆಭಾಗದ ರೈತರಿಗೆ ನೀರು ಸಿಗುವುದಿಲ್ಲ. ಹಾಗಾಗಿ ಕೆರೆಗಳಿಗೆ ನದಿಯಿಂದ ನೀರು ಹರಿಸಬೇಕು ಎಂದು ರೈತ ಮುಖಂಡ, ಎಪಿಎಂಸಿ ಮಾಜಿ ಅಧ್ಯಕ್ಷ ಬಿ.ಎಂ. ಸತೀಶ್ ಒತ್ತಾಯಿಸಿದ್ದಾರೆ.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಈ ಬಗ್ಗೆ ಮಾತನಾಡಿದ ಅವರು, ವಿವಿಧ ಯೋಜನೆಗಳ ಮೂಲಕ ಕೆರೆಗಳಿಗೆ ನದಿ ನೀರು ಹರಿಸಲು ಕಾಮಗಾರಿ ಕೈಗೊಳ್ಳಲಾಗುತ್ತಿದೆ. ಮೊದಲೇ ಭದ್ರಾ ಜಲಾಶಯದಿಂದ ನಾಲೆಗೆ ಬಿಡಲಾಗುತ್ತಿರುವ ನೀರು ಕೊನೆಭಾಗದ ಜಮೀನುಗಳಿಗೆ ತಲುಪುತ್ತಿಲ್ಲ. ಪ್ರತಿವರ್ಷ ರೈತರು ನೀರಿಗಾಗಿ ಹೋರಾಟ ಮಾಡುವ ಪರಿಸ್ಥಿತಿ ನಿರ್ಮಾಣ ಆಗಿದೆ. ಇಂತಹ ಸಮಯದಲ್ಲಿ ಮತ್ತೆ ಒಂದಿಷ್ಟು ಹೊಸ ಕೆರೆಗಳಿಗೆ ನೀರು ಹರಿಸಿದರೆ ಸಮಸ್ಯೆ ಇನ್ನಷ್ಟು ಉಲ್ಬಣಿಸಲಿದೆ ಎಂದರು.

ರಾಜ್ಯ ಸರ್ಕಾರ 13ನೇ ಹಣಕಾಸು ಯೋಜನೆಯಡಿ ದಾವಣಗೆರೆ ತಾಲ್ಲೂಕಿನ ಅಣಜಿ, ಆನಗೋಡು, ಕೊಡಗನೂರು, ನಾಗನೂರು, ಬೇತೂರು, ಲೋಕಿಕೆರೆಯ ಕೆರೆಗಳಿಗೆ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯಡಿ 0.369 ಟಿಎಂಸಿ ನೀರು ಹರಿಸಲು ಮುಂದಾಗುತ್ತಿದೆ. ಇದಕ್ಕಾಗಿ ಜಲಸಂಪನ್ಮೂಲ ಇಲಾಖೆಯ ಅನುಮತಿ ಸಹ ಕೇಳಲಾಗಿದೆ. ಒಂದು ವೇಳೆ ಅನುಮತಿ ನೀಡಿದ್ದೇ ಆದಲ್ಲಿ ರೈತರ ಜಮೀನುಗಳಿಗೆ ನೀರಿನ ಕೊರತೆ ಉಂಟಾಗಲಿದೆ ಎಂದು ಅವರು ತಿಳಿಸಿದರು.

ಕುಡಿಯುವ ಸಲುವಾಗಿಯೇ ಜಲಾಶಯದಲ್ಲಿ 7 ಟಿಎಂಸಿ ನೀರು ಮೀಸಲಿಡಲಾಗುತ್ತದೆ. ಆದರೆ, ಒಂದು ವರ್ಷ ಸಹ ಆ ನೀರನ್ನು ಕುಡಿಯಲು ಬಳಕೆ ಮಾಡಿಕೊಂಡಿಲ್ಲ. ಬದಲಿಗೆ ಆಗಿಂದಾಗ್ಗೆ ನದಿಗೆ ಬಿಟ್ಟು ಪೋಲು ಮಾಡಲಾಗುತ್ತಿದೆ. ನಾಲಾ ವ್ಯಾಪ್ತಿಯ ಪ್ರದೇಶಗಳಿಗೆ ಜಮೀನಿಗೆ ನೀರು ಬಿಟ್ಟಾಗಲೇ ಬಳಕೆ ಮಾಡಿಕೊಳ್ಳಲಾಗುತ್ತಿದೆ ಎಂದು ಅವರು ಹೇಳಿದರು.

ಬಿಜೆಪಿ ರೈತ ಮೋರ್ಚಾ ಜಿಲ್ಲಾಧ್ಯಕ್ಷ ಶಾಮನೂರು ಲಿಂಗರಾಜ್, ಮಾಜಿ ಮೇಯರ್ ಎಚ್.ಜಿ ಗುರುನಾಥ್, ಗಣೇಶಪ್ಪ, ಕುಂದುವಾಡ ಪ್ರಕಾಶ್, ಜಿಮ್ಮಿ ಹನುಮಂತಪ್ಪ, ದೇವರಾಜ ಸುದ್ದಿಗೋಷ್ಠಿಯಲ್ಲಿದ್ದರು.

ಮಿನಿ ಸುದ್ದಿ

■ ಇಂದು ರಘು ಆಚಾರ್ ಪ್ರಚಾರ

ಹರಿಹರ: ಚಿತ್ರದುರ್ಗ-ದಾವಣಗೆರೆ ವಿಧಾನ ಪರಿಷತ್ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ರಘು ಆಚಾರ್ ಡಿ.19 ರಂದು ಬೆಳಿಗ್ಗೆ 9ಕ್ಕೆ ತಾಲೂಕಿನ ಕೊಂಡಜ್ಜಿ ಗ್ರಾಮದಿಂದ ಮತಯಾಚನೆ ಆರಂಭಿಸಲಿದ್ದಾರೆ ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ.ಅಬಿದ್‌ಅಲಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ತಾಲೂಕಿನ ವಿವಿಧ ಗ್ರಾಪಂಗಳಿಗೆ ಭೇಟಿ ನೀಡಿ ಅವರು ಮತ ಯಾಚಿಸುವರು. ಜಿ.ಪಂ.ಅಧ್ಯಕ್ಷ ಎಚ್.ಪಿ.ಮಂಜಪ್ಪ, ವಿಧಾನ ಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್, ತಾಲೂಕು ಕಾಂಗ್ರೆಸ್ ಮುಖಂಡ ಎಸ್.ರಾಮಪ್ಪ, ನಗರ ಘಟಕದ ಅಧ್ಯಕ್ಷ ಬಿ.ಮೊಹಮ್ಮದ್ ಸಿಗ್ಬತ್‌ಉಲ್ಲಾ ಸೇರಿದಂತೆ ಪಕ್ಷದ ಎಲ್ಲಾ ಜನಪ್ರತಿನಿಗಳು, ಮುಖಂಡರು ಭಾಗವಹಿಸುವರು ಎಂದು ಅವರು ತಿಳಿಸಿದ್ದಾರೆ.

■ ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮ

ದಾವಣಗೆರೆ: ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ ನೂತನ ಜವಳಿ ನೀತಿ ಯೋಜನೆಯಡಿ ಬಿಐಇಟಿ ಕಾಲೇಜಿನ ಜೈವಿಕ ತಂತ್ರಜ್ಞಾನ ವಿಭಾಗದ ಸಭಾಂಗಣದಲ್ಲಿ ಡಿ.19ರಿಂದ 23ರ ವರೆಗೆ ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಜಿಲ್ಲಾಧಿಕಾರಿ ಎಸ್.ಟಿ. ಅಂಜನ್ ಕುಮಾರ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಕಾಲೇಜಿನ ಅಧ್ಯಕ್ಷ ಎ.ಸಿ. ಜಯಣ್ಣ, ಜಿಪಂ ಸಿಇಒ ಆರ್.ಗಿರೀಶ ಇತರರು ಪಾಲ್ಗೊಳ್ಳಲಿದ್ದಾರೆ.

■ 21ಕ್ಕೆ ವೈಕುಂಠ ಏಕಾದಶಿ ವಿಶೇಷ ಪೂಜೆ

ದಾವಣಗೆರೆ: ಬೇತೂರು ರಸ್ತೆಯಲ್ಲಿರುವ ಶ್ರೀ ವೆಂಕಟೇಶ್ವರಸ್ವಾಮಿ ದೇವಸ್ಥಾನದಲ್ಲಿ ಡಿ. 21 ರಂದು ಸೋಮವಾರ ವೈಕುಂಠ ಏಕಾದಶಿ ಮಹೋತ್ಸವ ನಡೆಯಲಿದೆ. ಅಂದು ಬೆಳಿಗ್ಗೆ 6 ರಿಂದ ರಾತ್ರಿ 11.30 ರ ವರೆಗೆ ಅಖಂಡ ದರ್ಶನ, ಪ್ರಸಾದ ವ್ಯವಸ್ಥೆ ಮಾಡಲಾಗಿದೆ ಎಂದು ಶ್ರೀ ವೆಂಕಟೇಶ್ವರ ಸೇವಾ ಸಮಿತಿ ಕಾರ್ಯದರ್ಶಿ ಎಚ್. ಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

■ 24ರಿಂದ ಕರ್ನಾಟಕ ದರ್ಶನ

ದಾವಣಗೆರೆ: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳಿಗೆ ಇದೇ ಪ್ರಪ್ರಥಮ ಬಾರಿಗೆ ಶಿಕ್ಷಣ ಇಲಾಖೆ, ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯಿಂದ ಡಿ. 24 ರಿಂದ 27ರ ವರೆಗೆ ಬಳ್ಳಾರಿ, ಹಾವೇರಿ, ಬಾಗಲಕೋಟೆ, ವಿಜಯಪುರ ಜಿಲ್ಲೆಯ ಐತಿಹಾಸಿಕ ಸ್ಥಳಗಳಿಗೆ ಪ್ರವಾಸ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಕಾರ್ಯದರ್ಶಿ ಎಸ್. ನಾಗರಾಜ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

■ 28ಕ್ಕೆ ಬಸವೇಶ್ವರಸ್ವಾಮಿ ಕಾರ್ತಿಕೋತ್ಸವ

ದಾವಣಗೆರೆ: ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲೂಕು ಕೊಟ್ಟೂರು ಪಟ್ಟಣದ ಶ್ರೀ ಗುರು ಬಸವೇಶ್ವರಸ್ವಾಮಿ ಕಾರ್ತಿಕೋತ್ಸವ ಹಾಗೂ ಬೆಳ್ಳಿ ರಥೋತ್ಸವವು ಡಿ.28ರಂದು ನಡೆಯಲಿದೆ ಎಂದು ಶ್ರೀ ಗುರು ಬಸವೇಶ್ವರಸ್ವಾಮಿ ದೇವಸ್ಥಾನದ ಕಾರ್ಯನಿರ್ವಾಹಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

■ ವಿವಿಧ ಸಂಘಗಳಿಗೆ ಸಮಾಪಕರ ನೇಮಕ

ದಾವಣಗೆರೆ: ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಅನ್ವಯ ಶ್ರೀ ಅಷ್ಟಲಕ್ಷ್ಮಿ ವಿವಿಧೊದ್ದೇಶ ಸಹಕಾರ ಸಂಘ, ಸರ್ಕಾರಿ (ಚಿಗಟೇರಿ) ಜನರಲ್ ಆಸ್ಪತ್ರೆ ನೌಕರರ ಸಹಕಾರ ಸಂಘ, ಮಂಡಕ್ಕಿ ಗ್ರಾಮೋದ್ಯೋಗ ಸಹಕಾರ ಸಂಘಗಳನ್ನು ಸಮಾಪನೆಗೊಳಿಸಿ, ಸಹಕಾರ ಸಹಾಯಕ ನಿಬಂಧಕ ಜಯಪ್ರಕಾಶ್ ಕೆ.ಜಿ. ಮಾರಾಟಧಿಕಾರಿಯವರನ್ನು ಸಮಾಪನಾಧಿಕಾರಿಯನ್ನಾಗಿ ನೇಮಿಸಲಾಗಿದೆ. ಸಂಘದ ಲೆಕ್ಕಪತ್ರ, ಆಸ್ತಿ ಕುರಿತು ಮಾಹಿತಿ ಹೊಂದಿದ ಸಂಘದವರು, ಸಾರ್ವಜನಿಕರು ವಿದ್ಯಾನಗರ 4ನೇ ಮುಖ್ಯ ರಸ್ತೆಯಲ್ಲಿರುವ ಸಂಘದ ಕಚೇರಿಗೆ ಭೇಟಿನೀಡಿ ಮಾಹಿತಿ ನೀಡಬಹುದು ಎಂದು ಪ್ರಕಟಣೆ ತಿಳಿಸಿದೆ.

ಪೊಲೀಸ್ ಆಟೋಟ

■ ವೀರೇಶ್ ಮತ್ತು ಪ್ರಕಾಶ್ ಲಮಾಣಿ ಜಂಟಿಯಾಗಿ, ಮಹಿಳಾ ವಿಭಾಗದಲ್ಲಿ ಉಷಾ ವೈಯಕ್ತಿಕ ಚಾಂಪಿಯನ್

ಕ್ರೀಡಾಕೂಟ: ಜಿಲ್ಲಾ ಸಶಸ್ತ್ರ ಮೀಸಲು ಪಡೆಗೆ ಸಮಗ್ರ ಪ್ರಶಸ್ತಿ

ದಾವಣಗೆರೆ: ಜಿಲ್ಲಾ ಪೊಲೀಸ್ ಕವಾಯತ್ ಮೈದಾನದಲ್ಲಿ ಶುಕ್ರವಾರ ಮುಕ್ತಾಯಗೊಂಡ 2015ನೇ ಸಾಲಿನ ಪೊಲೀಸ್ ವಾರ್ಷಿಕ ಕ್ರೀಡಾಕೂಟದಲ್ಲಿ ಜಿಲ್ಲಾ ಸಶಸ್ತ್ರ ಮೀಸಲು ಪಡೆ ಸಮಗ್ರ ಪ್ರಶಸ್ತಿ ಪಡೆದುಕೊಂಡಿದೆ.

ಕ್ರೀಡಾಕೂಟದ ಎಲ್ಲಾ ವಿಭಾಗದಲ್ಲಿ ಅತ್ಯುತ್ತಮ ನಿರ್ವಹಣೆ ತೋರಿದ ಜಿಲ್ಲಾ ಸಶಸ್ತ್ರ ಮೀಸಲು ಪಡೆ ಎಂದಿನಂತೆಯೇ ಈ ಬಾರಿಯೂ ಸಮಗ್ರ ಪ್ರಶಸ್ತಿ ಮುಡಿಗೇರಿಸಿಕೊಂಡಿತು. ಪುರುಷರ ವಿಭಾಗದಲ್ಲಿ ಜಿಲ್ಲಾ ಸಶಸ್ತ್ರ ಮೀಸಲು ಪಡೆಯ ವೀರೇಶ್ ಮತ್ತು ಪ್ರಕಾಶ್ ಲಮಾಣಿ ಜಂಟಿಯಾಗಿ, ಮಹಿಳಾ ವಿಭಾಗದಲ್ಲಿ ಮಹಿಳಾ ಠಾಣೆಯ ಉಷಾ ವೈಯಕ್ತಿಕ ಚಾಂಪಿಯನ್‌ಶಿಪ್ ಗಳಿಸಿದರು. ಜಿಲ್ಲಾ ಸಶಸ್ತ್ರ ಮೀಸಲು ಪಡೆಯ ಅಸ್ಗರ್ ಅಲಿ ಮತ್ತು ಮಹಿಳಾ ಠಾಣೆಯ ಉಷಾ 100 ಮೀಟರ್ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆಯುವ ಮೂಲಕ ವೇಗದ ರಾಜ, ರಾಣಿ ಪ್ರಶಸ್ತಿಗೆ ಪಾತ್ರರಾದರು.

ಪ್ರಶಸ್ತಿ ವಿತರಿಸಿ ಮಾತನಾಡಿದ ಪೂರ್ವ ವಲಯ ಪೊಲೀಸ್ ಮಹಾ ನಿರೀಕ್ಷಕ ಎಂ. ನಂಜುಂಡಸ್ವಾಮಿ, ದಾವಣಗೆರೆ ಜಿಲ್ಲೆಯ ಜನರು ಯಾವುದೇ ಕಾನೂನು ಸುವ್ಯವಸ್ಥೆಯ ಭಂಗ, ಕೋಮು ಗಲಭೆ ಇಲ್ಲದೆ ಅತಿ ನೆಮ್ಮದಿಯಿಂದ ಇರುವ ನಿಟ್ಟಿನಲ್ಲಿ ಇಡೀ ಜಿಲ್ಲೆಯ ಪೊಲೀಸ್ ಉತ್ತಮ ಕಾರ್ಯ ನಿರ್ವಹಿಸುತ್ತಿರುವುದಕ್ಕೆ ಸಾಕ್ಷಿ. ನಾಯಕ ಚೆನ್ನಾಗಿದ್ದರೆ ಆತನ ತಂಡವೂ ಚೆನ್ನಾಗಿರುತ್ತದೆ ಎನ್ನುವಂತೆ ರಕ್ಷಣಾಧಿಕಾರಿ ಡಾ. ಎಂ.ಬಿ. ಬೋರಲಿಂಗಯ್ಯ ಸಮರ್ಥ ನಾಯಕತ್ವದಲ್ಲಿ ಅಧಿಕಾರಿಗಳು, ಸಿಬ್ಬಂದಿ ಉತ್ತಮವಾಗಿ ಕೆಲಸ ನಿರ್ವಹಿಸುತ್ತಿದ್ದಾರೆ ಎಂದು ಸಂತಸ ವ್ಯಕ್ತಪಡಿಸಿದರು.

ದಾವಣಗೆರೆ: ಪೊಲೀಸ್ ವಾರ್ಷಿಕ ಕ್ರೀಡಾಕೂಟದ ಸಮಗ್ರ ಪ್ರಶಸ್ತಿ ಪಡೆದ ಜಿಲ್ಲಾ ಸಶಸ್ತ್ರ ಮೀಸಲು ಪಡೆ ತಂಡಕ್ಕೆ ಪೂರ್ವ ವಲಯ ಪೊಲೀಸ್ ಮಹಾನಿರೀಕ್ಷಕ ಎಂ. ನಂಜುಂಡಸ್ವಾಮಿ ಬಹುಮಾನ ವಿತರಿಸಿದರು. ಎಸ್ಪಿ ಡಾ| ಎಂ.ಬಿ. ಬೋರಲಿಂಗಯ್ಯ ಇತರರು ಇದ್ದರು.

ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಎರಡು ದಿನಗಳ ಕ್ರೀಡಾಕೂಟದಲ್ಲಿ ಅತ್ಯುತ್ತಮ ಆಟ ಪ್ರದರ್ಶಿಸಿದ್ದಾರೆ. ಅದರಲ್ಲೂ ಮಹಿಳಾ ಸಿಬ್ಬಂದಿ ಪುರುಷರಿಗಿಂತಲೂ ಉತ್ತಮ ನಿರ್ವಹಣೆ ತೋರಿದರು. ನಾವು ಯಾರಿಗೇನು ಕಡಿಮೆ ಎನ್ನುವಂತೆ ಇದೇ ಪ್ರಥಮ ಬಾರಿಗೆ ಮಹಿಳಾ ವಿಭಾಗದಲ್ಲಿ ಕಬ್ಬಡ್ಡಿ ಪಂದ್ಯಾವಳಿ ನಡೆದಿರುವುದು ಸಂತೋಷದ ವಿಚಾರ. ಬೆಂಗಳೂರಿನಲ್ಲಿ ನಡೆಯಲಿರುವ ರಾಜ್ಯ ಮಟ್ಟದ ಪೊಲೀಸ್ ಕ್ರೀಡಾಕೂಟದಲ್ಲಿ ಉತ್ತಮ ಸಾಧನೆಯ ಮೂಲಕ ಪ್ರಶಸ್ತಿ ಗಳಿಸಿ, ಜಿಲ್ಲೆಗೆ ಗೌರವ ತರಬೇಕು ಎಂದು ಶುಭ ಹಾರೈಸಿದರು.

ಜಿಲ್ಲೆಯಲ್ಲಿನ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ಕ್ರೀಡೆಯಲ್ಲಿ ಇಷ್ಟೊಂದು ಪ್ರತಿಭಾವಂತರಿದ್ದಾರೆ ಎಂಬ ವಿಷಯ ಮೊದಲೇ ಗೊತ್ತಿದ್ದರೆ ಎಲ್ಲಾ ಕೆಲಸ ಬದಿಗೊತ್ತಿ ತಾವು ಎರಡು ದಿನ ಕ್ರೀಡಾಂಗಣದಲ್ಲಿ ಇರುತ್ತಿದ್ದೆವು. ಎಲ್ಲಾ ಕ್ರೀಡೆಯಲ್ಲಿ ಭಾಗವಹಿಸಿದವರು ಮತ್ತು ಅದಕ್ಕೆ ಅತಿ ಹೆಚ್ಚಿನ ಪ್ರೋತ್ಸಾಹ, ಸಹಕಾರ ನೀಡಿರುವ ಪ್ರೇಕ್ಷಕರು ನಿಜಕ್ಕೂ ಅಭಿನಂದನಾರ್ಹರು. ಸದಾ ಒತ್ತಡದ ಕೆಲಸ ಮಾಡುವ ಅಧಿಕಾರಿಗಳು, ಸಿಬ್ಬಂದಿ ದೈಹಿಕ, ಮಾನಸಿಕ ಸದೃಢತೆಗೆ ಈ ರೀತಿಯ ಕ್ರೀಡಾಕೂಟ ಅತ್ಯವಶ್ಯ ಎಂದು ತಿಳಿಸಿದರು.

ಜಿಲ್ಲಾ ರಕ್ಷಣಾಧಿಕಾರಿ ಡಾ. ಎಂ.ಬಿ. ಬೋರಲಿಂಗಯ್ಯ, ಹೆಚ್ಚುವರಿ ಅಧೀಕ್ಷಕ ಗಿರಿರಾಜ್ ಎಸ್. [illegible] ಇತರರು ಇದ್ದರು. ಕೇಂದ್ರ ವೃತ್ತ ನಿರೀಕ್ಷಕ ಜೆ.ಬಿ. ಉಮೇಶ್ ನಿರೂಪಿಸಿದರು.